2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 118/2016</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ತಿಮ್ಮಪ್ಪ | ಪಿಡಬ್ಲೂ -17 |
| ತಂದೆಯ ಹೆಸರು | - | ಲೇಟ್ ಮೂಡಲಗಿರಿಯಪ್ಪ | ಸಿ ಡಬ್ಲ್ಯು 27 |
| ವಯಸ್ಸು | - | 59 ವರ್ಷ | |
| ಉದ್ಯೋಗ | - | ತಹಶೀಲ್ದಾರ್ | |
| ವಾಸ ಸ್ಥಳ | - | ಹಾಸನ | |

ದಿನಾಂಕಃ 11.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು 2015 ನೇ ಇಸವಿ ಮಾರ್ಚ್ ತಿಂಗಳಿನಿಂದ 2015 ನೇ ಇಸವಿ ಡಿಸೆಂಬರ್ ತಿಂಗಳಿನವರೆಗೆ ನ.ರಾ.ಪುರ ತಾಲ್ಲೂಕಿನ ತಹಶೀಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕ 16-11-2015 ರಂದು ನ.ರಾ.ಪುರ ಜೆ ಎಂ ಎಫ್ ಸಿ ನ್ಯಾಯಾಲಯದಿಂದ ನ.ರಾ.ಪುರ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 135/2015 ಕ್ಕೆ ಸಂಬಂಧಿಸಿದ ಆರೋಪಿತರನ್ನು ಸಾಕ್ಷಿದಾರರ ಮೂಲಕ ಗುರುತಿಸುವ ಕವಾಯಿತನ್ನು ನಡೆಸಿಕೊಡಬೇಕೆಂದು ಆದೇಶವಾದ ಬಗ್ಗೆ ನಮ್ಮ ಕಚೇರಿಗೆ ಮನವಿ ಬಂದಿತ್ತು. ಅದರಂತೆ ದಿನಾಂಕ 17.11.2015 ರಂದು ನ.ರಾ.ಪುರ ಉಪ ಬಂಧಿಖಾನೆಯಲ್ಲಿ ಗುರುತಿನ ಕವಾಯಿತನ್ನು ನಡೆಸಿಕೊಡುವುದಾಗಿ ಹೇಳಿ ಸದರಿ ಬಂಧಿಖಾನೆಯವರಿಗೆ ಮತ್ತು ತನಿಖಾಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ.

3. ದಿನಾಂಕ 17.11.2015 ರಂದು ಬೆಳಿಗ್ಗೆ 9.45 ಗಂಟೆಗೆ ನಾನು

ನಮ್ಮ ಅಧೀನ ಸಿಬ್ಬಂದಿಯೊಂದಿಗೆ ನ.ರಾ.ಪುರ ಉಪ ಬಂಧಿಖಾನೆಗೆ ಭೇಟಿ ನೀಡಿರುತ್ತೇನೆ. ಅಲ್ಲಿ ಸದರಿ ಬಂಧಿಖಾನೆಯ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು ಮತ್ತು ಪಿರ್ಯಾದುದಾರರಾದ ಪ್ರಸೀದ್ ಕೆ ನಾಯರ್ ಮತ್ತು ಪೊಲೀಸರು ಇದ್ದರು. ಪೊಲೀಸರು ನನಗೆ ಸದರಿ ಪಿರ್ಯಾದುದಾರರನ್ನು ಪರಿಚಯಿಸಿದರು. ನಂತರ ನಾನು ಪಿರ್ಯಾದುದಾರರನ್ನು ಪ್ರತ್ಯೇಕ ಕೊಠಡಿಯಲ್ಲಿ ಇರಿಸುವಂತೆ ಸೂಚಿಸಿದೆನು.

4. ಬೆಳಿಗ್ಗೆ 10.00 ಗಂಟೆಗೆ ನ.ರಾ.ಪುರ ಪೊಲೀಸ್ ಠಾಣೆಯ ಎ ಎಸ್ ಐ ಗುರುಶಾಂತಪ್ಪ, ಪಿಸಿ ಜಗದೀಶ್, ಮೋಹನ್ ಮತ್ತು ಇಬ್ಬರು ಡಿ ಎ ಆರ್ ಸಿಬ್ಬಂದಿಗಳು ತಮ್ಮ ಬೆಂಗಾವಲಿನಲ್ಲಿ 5 ಜನ ಆರೋಪಿತರನ್ನು ಕರೆದುಕೊಂಡು ಬಂದರು. ಸದರಿ ಆರೋಪಿತರನ್ನೂ ಸಹ ಪ್ರತ್ಯೇಕ ಕೊಠಡಿಯಲ್ಲಿ ಇರಿಸುವಂತೆ ಸೂಚಿಸಿದೆನು. ನಂತರ ಸದರಿ ಆರೋಪಿತರ ಪೈಕಿ ಒಬ್ಬರನ್ನು ಕರೆಯಿಸಿ ಅವರೊಂದಿಗೆ ಸದರಿ ಜೈಲಿನಲ್ಲಿದ್ದ ವಿಚಾರಣಾಧೀನ ಖೈದಿಗಳನ್ನು ಕರೆಯಿಸಿ ಅವರುಗಳ ಮಧ್ಯೆ ಆರೋಪಿಯನ್ನು ನಿಲ್ಲಿಸಿರುತ್ತೇನೆ. ಮೊದಲನೇ ಸುತ್ತಿನಲ್ಲಿ ಆರೋಪಿಯನ್ನು ಸೇರಿ ಒಟ್ಟು 7 ಜನರನ್ನು ನಿಲ್ಲಿಸಿರುತ್ತೇನೆ.

5. ಕವಾಯಿತನ್ನು ನಡೆಸುವ ಮೊದಲು ಫ್ರಾಸಾ.1 ರವರನ್ನು ಕರೆಯಿಸಿ ನೀವು ಏತಕ್ಕಾಗಿ ಇಲ್ಲಿಗೆ ಬಂದಿದ್ದೀರಿ ಎಂದು ಕೇಳಲಾಗಿ ಅವರು ದಿನಾಂಕ 28.10.2015 ರಂದು ರಾತ್ರಿ ನನ್ನ ಮನೆಯಲ್ಲಿ ದರೋಡೆ ಮಾಡಿದ ಆರೋಪಿಗಳನ್ನು ಗುರುತಿಸಲು ಬಂದಿದ್ದೇನೆ ಎಂದು ತಿಳಿಸಿದರು. ಕೃತ್ಯ ನಡೆದ

ಸಮಯದಲ್ಲಿ ನೀವು ಹಾಜರಿದ್ದಿರೇ ಎಂದು ಕೇಳಲಾಗಿ ಅವರು ಹೌದು ಎಂದು ನುಡಿದಿರುತ್ತಾರೆ. ಸದರಿ ಘಟನೆಯಲ್ಲಿ ಎಷ್ಟು ಜನ ಆರೋಪಿತರು ಭಾಗವಹಿಸಿದ್ದರು ಎಂದು ಕೇಳಲಾಗಿ ಅವರು ಒಟ್ಟು 5 ಜನ ಆರೋಪಿತರು ಕೃತ್ಯದಲ್ಲಿ ಭಾಗಿಯಾಗಿದ್ದಾಗಿ ತಿಳಿಸಿದರು. ಕೃತ್ಯ ನಡೆದ ಸಮಯದಲ್ಲಿ ಸದರಿ ಆರೋಪಿತರನ್ನು ನೋಡಿದ್ದೀರಾ ಎಂದು ಕೇಳಲಾಗಿ ಅವರು ಹೌದು ಎಂದು ನುಡಿದಿರುತ್ತಾರೆ. ನಂತರ ಫ್ರಾಸಾ.1 ರವರನ್ನು ಕುರಿತು ಆರೋಪಿತರನ್ನು ಗುರುತಿಸುತ್ತೀರಾ ಎಂದು ಕೇಳಲಾಗಿ ಅವರು ಗುರುತಿಸುತ್ತೇನೆ ಎಂದು ತಿಳಿಸಿದರು. ಆಗ ಫ್ರಾಸಾ.1 ರವರು ಅವರ ಮುಂದೆ ನಿಲ್ಲಿಸಲಾಗಿದ್ದ 7 ಜನ ಖೈದಿಗಳ ಪೈಕಿ ಆರೋಪಿತರನ್ನು ಗುರುತಿಸಿ ಎಂದು ಕೇಳಲಾಗಿ ಅವರು ಕ್ರಮ ಸಂಖ್ಯೆ 5 ರಲ್ಲಿ ನಿಲ್ಲಿಸಲಾಗಿದ್ದ 1 ನೇ ಆರೋಪಿ ಮನುನನ್ನು ನೋಡಿ ಗುರುತಿಸಿ ಆತ ಆರೋಪಿ ಎಂದು ಗುರುತಿಸಿರುತ್ತಾರೆ. ಸದರಿ ಸುತ್ತಿಗೆ ಸಂಬಂಧಿಸಿದ ಕವಾಯಿತು ಪ್ರಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಬಿ) ಎಂದು ಗುರುತಿಸಲಾಯಿತು. ಸದರಿ ಪ್ರಪತ್ರಕ್ಕೆ ಫ್ರಾಸಾ.1 ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ.

6. ಮೊದಲನೇ ಸುತ್ತಿನ ಕವಾಯಿತಿನ ನಂತರ ಪಿರ್ಯಾದಿಯನ್ನು ಪ್ರತ್ಯೇಕ ಕೊಠಡಿಗೆ ವಾಪಾಸ್ಸು ಕಳುಹಿಸಲಾಯಿತು. ನಂತರ ಮತ್ತೊಬ್ಬ ಆರೋಪಿಯನ್ನು ಕರೆಯಿಸಿ ಆತನನ್ನು 5 ಜನ ವಿಚಾರಣಾಧೀನ ಖೈದಿಗಳ ಮಧ್ಯದಲ್ಲಿ ನಿಲ್ಲಿಸಿರುತ್ತೇನೆ. ನಂತರ ಫ್ರಾಸಾ.1 ರವರನ್ನು ಕುರಿತು ಮೇಲೆ ಹೇಳಿದಂತೆ ಪ್ರಶ್ನೆಗಳನ್ನು

ಕೇಳಿರುತ್ತೇನೆ. ಸದರಿ ಪ್ರಶ್ನೆಗಳಿಗೆ ಫ್ರಾಸಾ.1 ರವರು ಮೇಲೆ ಹೇಳಿದಂತೆ ಉತ್ತರಿಸಿ ಆರೋಪಿತರನ್ನು ಗುರುತಿಸುವುದಾಗಿ ನುಡಿದಿರುತ್ತಾರೆ. ನಂತರ ಫ್ರಾಸಾ.1 ರವರು ಅವರ ಮುಂದೆ ನಿಲ್ಲಿಸಲಾಗಿದ್ದ ವ್ಯಕ್ತಿಗಳ ಪೈಕಿ ಕ್ರಮ ಸಂಖ್ಯೆ6 ರಲ್ಲಿ ನಿಲ್ಲಿಸಲಾಗಿದ್ದ 4 ನೇ ಆರೋಪಿ ಬೆನಕೇಶನನ್ನು ನೋಡಿ ಗುರುತಿಸಿರುತ್ತಾರೆ. ಆ ಬಗ್ಗೆ ಪ್ರಪತ್ರವನ್ನು ತಯಾರಿಸಿ ಅದಕ್ಕೆ ಫ್ರಾಸಾ.1 ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸುತ್ತಿಗೆ ಸಂಬಂಧಿಸಿದ ಕವಾಯಿತು ಪ್ರಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು.

7. ಸದರಿ ಸುತ್ತಿನ ಕವಾಯಿತಿನ ನಂತರ ಪಿರ್ಯಾದಿಯನ್ನು ಪ್ರತ್ಯೇಕ ಕೊಠಡಿಗೆ ವಾಪಾಸ್ಸು ಕಳುಹಿಸಲಾಯಿತು. ನಂತರ ಮತ್ತೊಬ್ಬ ಆರೋಪಿಯನ್ನು ಕರೆಯಿಸಿ ಆತನನ್ನು 7 ಜನ ವಿಚಾರಣಾಧೀನ ಖೈದಿಗಳ ಮಧ್ಯದಲ್ಲಿ ನಿಲ್ಲಿಸಿರುತ್ತೇನೆ. ನಂತರ ಫ್ರಾಸಾ.1 ರವರನ್ನು ಕುರಿತು ಮೇಲೆ ಹೇಳಿದಂತೆ ಪ್ರಶ್ನೆಗಳನ್ನು ಕೇಳಿರುತ್ತೇನೆ. ಸದರಿ ಪ್ರಶ್ನೆಗಳಿಗೆ ಫ್ರಾಸಾ.1 ರವರು ಮೇಲೆ ಹೇಳಿದಂತೆ ಉತ್ತರಿಸಿ ಆರೋಪಿತರನ್ನು ಗುರುತಿಸುವುದಾಗಿ ನುಡಿದಿರುತ್ತಾರೆ. ನಂತರ ಫ್ರಾಸಾ.1 ರವರು ಅವರ ಮುಂದೆ ನಿಲ್ಲಿಸಲಾಗಿದ್ದ ವ್ಯಕ್ತಿಗಳ ಪೈಕಿ ಕ್ರಮ ಸಂಖ್ಯೆ2 ರಲ್ಲಿ ನಿಲ್ಲಿಸಲಾಗಿದ್ದ 2 ನೇ ಆರೋಪಿ ಮಂಜುನಾಥ್ ನನ್ನು ನೋಡಿ ಗುರುತಿಸಿರುತ್ತಾರೆ. ಆ ಬಗ್ಗೆ ಪ್ರಪತ್ರವನ್ನು ತಯಾರಿಸಿ ಅದಕ್ಕೆ ಫ್ರಾಸಾ.1 ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಸದರಿ

ಸುತ್ತಿಗೆ ಸಂಬಂಧಿಸಿದ ಕವಾಯಿತು ಪ್ರಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.7 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.7(ಬಿ) ಎಂದು ಗುರುತಿಸಲಾಯಿತು.

8. ಸದರಿ ಸುತ್ತಿನ ಕವಾಯಿತಿನ ನಂತರ ಪಿರ್ಯಾದಿಯನ್ನು ಪ್ರತ್ಯೇಕ ಕೊಠಡಿಗೆ ವಾಪಾಸ್ಸು ಕಳುಹಿಸಲಾಯಿತು. ನಂತರ ಮತ್ತೊಬ್ಬ ಆರೋಪಿಯನ್ನು ಕರೆಯಿಸಿ ಆತನನ್ನು 6 ಜನ ವಿಚಾರಣಾಧೀನ ಖೈದಿಗಳ ಮಧ್ಯದಲ್ಲಿ ನಿಲ್ಲಿಸಿರುತ್ತೇನೆ. ನಂತರ ಪ್ರಾಸಾ.1 ರವರನ್ನು ಕುರಿತು ಮೇಲೆ ಹೇಳಿದಂತೆ ಪ್ರಶ್ನೆಗಳನ್ನು ಕೇಳಿರುತ್ತೇನೆ. ಸದರಿ ಪ್ರಶ್ನೆಗಳಿಗೆ ಪ್ರಾಸಾ.1 ರವರು ಮೇಲೆ ಹೇಳಿದಂತೆ ಉತ್ತರಿಸಿ ಆರೋಪಿತರನ್ನು ಗುರುತಿಸುವುದಾಗಿ ನುಡಿದಿರುತ್ತಾರೆ. ನಂತರ ಪ್ರಾಸಾ.1 ರವರು ಅವರ ಮುಂದೆ ನಿಲ್ಲಿಸಲಾಗಿದ್ದ ವ್ಯಕ್ತಿಗಳ ಪೈಕಿ ಕ್ರಮ ಸಂಖ್ಯೆ 5 ರಲ್ಲಿ ನಿಲ್ಲಿಸಲಾಗಿದ್ದ 5 ನೇ ಆರೋಪಿ ಶ್ರೀಧರನನ್ನು ನೋಡಿ ಗುರುತಿಸಿರುತ್ತಾರೆ. ಆ ಬಗ್ಗೆ ಪ್ರಪತ್ರವನ್ನು ತಯಾರಿಸಿ ಅದಕ್ಕೆ ಪ್ರಾಸಾ.1 ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸುತ್ತಿಗೆ ಸಂಬಂಧಿಸಿದ ಕವಾಯಿತು ಪ್ರಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.8 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.8(ಬಿ) ಎಂದು ಗುರುತಿಸಲಾಯಿತು.

9. ಸದರಿ ಸುತ್ತಿನ ಕವಾಯಿತಿನ ನಂತರ ಪಿರ್ಯಾದಿಯನ್ನು ಪ್ರತ್ಯೇಕ ಕೊಠಡಿಗೆ ವಾಪಾಸ್ಸು ಕಳುಹಿಸಲಾಯಿತು. ನಂತರ ಮತ್ತೊಬ್ಬ ಆರೋಪಿಯನ್ನು ಕರೆಯಿಸಿ ಆತನನ್ನು 5 ಜನ

ವಿಚಾರಣಾಧೀನ ಖೈದಿಗಳ ಮಧ್ಯದಲ್ಲಿ ನಿಲ್ಲಿಸಿರುತ್ತೇನೆ. ನಂತರ ಫ್ರಾಸಾ.1 ರವರನ್ನು ಕುರಿತು ಮೇಲೆ ಹೇಳಿದಂತೆ ಪ್ರಶ್ನೆಗಳನ್ನು ಕೇಳಿರುತ್ತೇನೆ. ಸದರಿ ಪ್ರಶ್ನೆಗಳಿಗೆ ಫ್ರಾಸಾ.1 ರವರು ಮೇಲೆ ಹೇಳಿದಂತೆ ಉತ್ತರಿಸಿ ಆರೋಪಿತರನ್ನು ಗುರುತಿಸುವುದಾಗಿ ನುಡಿದಿರುತ್ತಾರೆ. ನಂತರ ಫ್ರಾಸಾ.1 ರವರು ಅವರ ಮುಂದೆ ನಿಲ್ಲಿಸಲಾಗಿದ್ದ ವ್ಯಕ್ತಿಗಳ ಪೈಕಿ ಕ್ರಮ ಸಂಖ್ಯೆ 4 ರಲ್ಲಿ ನಿಲ್ಲಿಸಲಾಗಿದ್ದ 3 ನೇ ಆರೋಪಿ ಅಜಯ್‌ನನ್ನು ನೋಡಿ ಗುರುತಿಸಿರುತ್ತಾರೆ. ಆ ಬಗ್ಗೆ ಪ್ರಪತ್ರವನ್ನು ತಯಾರಿಸಿ ಅದಕ್ಕೆ ಫ್ರಾಸಾ.1 ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸುತ್ತಿಗೆ ಸಂಬಂಧಿಸಿದ ಕವಾಯಿತು ಪ್ರಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.9 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಬಿ) ಎಂದು ಗುರುತಿಸಲಾಯಿತು.

10. ಸದರಿ ಕವಾಯಿತಿನ ಬಳಿಕ ಪಿರ್ಯಾದಿಯನ್ನು ಪ್ರತ್ಯೇಕ ಕೊಠಡಿಗೆ ವಾಪಾಸ್ಸು ಕಳುಹಿಸಲಾಯಿತು. ನಂತರ 5 ಜನ ಆರೋಪಿತರನ್ನು ಕರೆಯಿಸಿ ಅವರುಗಳನ್ನು 11 ಜನ ವಿಚಾರಣಾಧೀನ ಖೈದಿಗಳ ಮಧ್ಯದಲ್ಲಿ ನಿಲ್ಲಿಸಿರುತ್ತೇನೆ. ಆ ಸುತ್ತಿನಲ್ಲಿ ಒಟ್ಟು 16 ಜನರನ್ನು ನಿಲ್ಲಿಸಿರುತ್ತೇನೆ. ನಂತರ ಫ್ರಾಸಾ.1 ರವರನ್ನು ಕುರಿತು ಮೇಲೆ ಹೇಳಿದಂತೆ ಪ್ರಶ್ನೆಗಳನ್ನು ಕೇಳಿರುತ್ತೇನೆ. ಸದರಿ ಪ್ರಶ್ನೆಗಳಿಗೆ ಫ್ರಾಸಾ.1 ರವರು ಮೇಲೆ ಹೇಳಿದಂತೆ ಉತ್ತರಿಸಿ ಆರೋಪಿತರನ್ನು ಗುರುತಿಸುವುದಾಗಿ ನುಡಿದಿರುತ್ತಾರೆ. ನಂತರ ಫ್ರಾಸಾ.1 ರವರು ಅವರ ಮುಂದೆ ನಿಲ್ಲಿಸಲಾಗಿದ್ದ ವ್ಯಕ್ತಿಗಳ ಪೈಕಿ ಕ್ರಮ ಸಂಖ್ಯೆ 1 ರಲ್ಲಿ ನಿಲ್ಲಿಸಲಾಗಿದ್ದ

2 ನೇ ಆರೋಪಿ ಮಂಜುನಾಥ,ಕ್ರಮ ಸಂಖ್ಯೆ 3 ರಲ್ಲಿ ನಿಲ್ಲಿಸಲಾಗಿದ್ದ 4 ನೇ ಆರೋಪಿ ಬೆನಕೇಶ, ಕ್ರಮ ಸಂಖ್ಯೆ7 ರಲ್ಲಿ ನಿಲ್ಲಿಸಲಾಗಿದ್ದ 3 ನೇ ಆರೋಪಿ ಅಜಯ್, ಕ್ರಮ ಸಂಖ್ಯೆ 11 ರಲ್ಲಿ ನಿಲ್ಲಿಸಲಾಗಿದ್ದ 5 ನೇ ಆರೋಪಿ ಶ್ರೀಧರ ಮತ್ತು ಕ್ರಮ ಸಂಖ್ಯೆ 16 ರಲ್ಲಿ ನಿಲ್ಲಿಸಲಾಗಿದ್ದ 1 ನೇ ಆರೋಪಿ ಮನು ರವರುಗಳನ್ನು ನೋಡಿ ಫ್ರಾಸಾ.1 ರವರು ಗುರುತಿಸಿರುತ್ತಾರೆ. ಆ ಬಗ್ಗೆ ಪ್ರಪತ್ರವನ್ನು ತಯಾರಿಸಿ ಅದಕ್ಕೆ ಫ್ರಾಸಾ.1 ರವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸುತ್ತಿಗೆ ಸಂಬಂಧಿಸಿದ ಕವಾಯಿತು ಪ್ರಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.10(ಬಿ) ಎಂದು ಗುರುತಿಸಲಾಯಿತು. ಆ ಬಗ್ಗೆ ಬೆಳಿಗ್ಗೆ 10.00 ಗಂಟೆಗೆ ಕವಾಯಿತಿನ್ನು ಫ್ರಾರಂಭಿಸಿ ಮಧ್ಯಾಹ್ನ 12.00 ಗಂಟೆಗೆ ಮುಕ್ತಾಯಗೊಳಿಸಿರುತ್ತೇನೆ.

11. ಆರೋಪಿತರನ್ನು ಗುರುತಿಸುವ ಕವಾಯಿತಿನಲ್ಲಿ ಮೆಮೋರಂಡಮ್ ಗಳಲ್ಲಿರುವ ಉತ್ತರಗಳನ್ನು ಪಿರ್ಯಾದುದಾರರವರಿಗೆ ಓದಿ ತಿಳಿಸಿ ಅದನ್ನು ಅವರು ಸರಿ ಇದೆ ಎಂದು ಒಪ್ಪಿದ್ದಾಗಿ ದೃಢೀಕರಣ ಪತ್ರವನ್ನು ನೀಡಿರುತ್ತೇನೆ ಮತ್ತು ಅದಕ್ಕೆ ಪಿರ್ಯಾದಿಯ ಸಹಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.11 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.11(ಬಿ) ಎಂದು ಗುರುತಿಸಲಾಯಿತು. ಸದರಿ ದೃಢೀಕರಣ

ಪತ್ರ ಮತ್ತು ಪ್ರಪತ್ರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ.

12. ಆ ದಿನ ಗುರುತಿನ ಕವಾಯಿತಿನಲ್ಲಿ ಪಿರ್ಯಾದಿಯು ನೋಡಿ ಗುರುತಿಸಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರ ಪೈಕಿ ನೀಲಿ ಬಣ್ಣದ ಶರ್ಟನ್ನು ಧರಿಸಿರುವ 1 ನೇ ಆರೋಪಿ ಮನು ಎಂದು ನುಡಿದಿರುತ್ತಾರೆ. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ನೋಡಿ ಆತ 4 ನೇ ಆರೋಪಿ ಬೆನಕೇಶ ಎಂದು ನುಡಿದಿರುತ್ತಾರೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರ ಪೈಕಿ ಎಡದಿಂದ ಮೊದಲಿಗೆ ಕುಳಿತಿರುವ ವ್ಯಕ್ತಿ 2 ನೇ ಆರೋಪಿ ಮಂಜುನಾಥ ಎಂದು ನುಡಿದಿರುತ್ತಾರೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರ ಪೈಕಿ ಬಲಭಾಗದಿಂದ ಮೊದಲಿಗೆ ಕುಳಿತಿರುವ ವ್ಯಕ್ತಿಯನ್ನು ನೋಡಿ ಆತ 5 ನೇ ಆರೋಪಿ ಶ್ರೀಧರ ಎಂದು ನುಡಿದಿರುತ್ತಾರೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ 5 ಜನ ಆರೋಪಿತರ ಪೈಕಿ ಮಧ್ಯದಲ್ಲಿ ಕುಳಿತಿರುವ ವ್ಯಕ್ತಿ 3 ನೇ ಆರೋಪಿ ಅಜಯ್ ಎಂದು ನುಡಿದಿರುತ್ತಾರೆ. ಸಾಕ್ಷಿಯು ಗುರುತಿಸಿದ ಎಲ್ಲಾ ಆರೋಪಿತರ ಹೆಸರುಗಳು ಸರಿಯಾಗಿರುವುದು ಕಂಡು ಬಂದಿರುತ್ತದೆ.

<u>ಪಾಟೀ ಸವಾಲುಃ ಶ್ರೀ ಹೆಚ್ ಎ ಟಿ ವಕೀಲರಿಂದಃ **1** ರಿಂದ **5** ನೇ ಆರೋಪಿತರ ಪರವಾಗಿಃ</u>

13. ನ.ರಾ.ಪುರ ಉಪ ಬಂಧಿಖಾನೆಗೆ ಪತ್ರ ವ್ಯವಹಾರ ಮಾಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನ.ರಾ.ಪುರ ಬಂಧಿಖಾನೆಯ ಅಧಿಕಾರಿಗಳ ಕಚೇರಿಯನ್ನು ನೀವು ಉಪಯೋಗಿಸಿದ್ದು ನೆನಪಿದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಅವರ ಕಚೇರಿಯ ಯಾವುದಾದರೂ ಉಪಕರಣಗಳನ್ನು ಉಪಯೋಗಿಸಿದ್ದೀರಾ ಎಂದರೆ ಸಾಕ್ಷಿ ಸರಿಯಾಗಿ ನೆನಪಿಲ್ಲ ಎನ್ನುತ್ತಾರೆ. ನಿಪಿ.5 ರಿಂದ ನಿಪಿ.10 ರಲ್ಲಿ ನೀವು ಪ್ರಾಸಾ.1 ರವರಿಗೆ ಕೇಳಿದ ಪ್ರಶ್ನಾವಳಿಗಳನ್ನು ಮತ್ತು ಅವರಿಂದ ಪಡೆದುಕೊಂಡ ಉತ್ತರಗಳನ್ನು ನೀವು ಬರೆದಿದ್ದೀರಾ ಎಂದರೆ ಸಾಕ್ಷಿ ಪೊಲೀಸರು ಬರೆದಿದ್ದಾರೆ ಎಂದು ನುಡಿದು ನಂತರ ಮುಂದುವರೆದು ನಾನು ಹೇಳಿದ ಮೇರೆಗೆ ಪೊಲೀಸರು ಬರೆದಿದ್ದಾರೆ ಎನ್ನುತ್ತಾರೆ. ಸದರಿ ಬರವಣಿಗೆಯನ್ನು ಮಾಡಿದ ಪೊಲೀಸ್ ಅಧಿಕಾರಿಯ ಬಿಕ್ಕಲಂನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

14. ನಿಪಿ.5 ರಿಂದ ನಿಪಿ.10 ಅನ್ನು ನಾನು ಮೊದಲೇ ತಯಾರಿಸಿಕೊಂಡು ಹೋಗಿರಲಿಲ್ಲ ಕವಾಯಿತಿನ ಸಮಯದಲ್ಲಿ ತಯಾರಿಸಿದ್ದೇನೆ. ನಿಪಿ.11 ರಲ್ಲಿ ದಿನಾಂಕವನ್ನು ನಮೂದಿಸಲಾಗಿಲ್ಲ ಎಂದರೆ ಸರಿ. ನಿಪಿ.5 ರಿಂದ ನಿಪಿ.10 ರಲ್ಲಿ ದಿನಾಂಕವನ್ನು ತುಂಬಿ ಬರೆಯಲಾಗಿದೆ ಎಂದರೆ ಸರಿ. ನಿಪಿ.5 ರಿಂದ ನಿಪಿ.10 ರಲ್ಲಿ ನಿಮ್ಮ ಸಹಿಯೊಂದಿಗೆ ದಿನಾಂಕವನ್ನು ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೇಲೆ

ದಿನಾಂಕವನ್ನು ನಮೂದಿಸಿದ್ದರಿಂದ ಸಹಿಯ ಕೆಳಗೆ ದಿನಾಂಕವನ್ನು ನಮೂದಿಸಿಲ್ಲ ಎನ್ನುತ್ತಾರೆ.

15. ವಿಚಾರಣಾಧೀನ ಖೈದಿಗಳ ಪೈಕಿ ಎಷ್ಟು ಜನರನ್ನು ಕಳುಹಿಸಿಕೊಡಬೇಕು ಎಂದು ನೀವು ಜೈಲಿನ ಅಧಿಕಾರಿಗಳಿಗೆ ಕೋರಿಕೆ ಪತ್ರ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಮೌಖಿಕವಾಗಿ ಕೇಳಿಕೊಂಡಿದ್ದೇನೆ ಎನ್ನುತ್ತಾರೆ. ಗುರುತು ಹಚ್ಚುವಿಕೆಯ ಕವಾಯಿತನ್ನು ನಡೆಸುವ ಪೂರ್ವದಲ್ಲಿ ವಿಚಾರಣಾಧೀನ ಖೈದಿಗಳ ವಿವರಗಳನ್ನು ಮತ್ತು ಗುರುತು ಹಚ್ಚಬೇಕಾಗಿರುವ ಆರೋಪಿತರ ವಿವರಗಳನ್ನು ಕೇಳಿ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

16. ನೀವು ಇಷ್ಟು ಗಂಟೆಗೆ ಹಾಜರಾಗುವುದಾಗಿ ತಿಳಿಸಿ ಜೈಲಿನ ಅಧಿಕಾರಿಗಳಿಗೆ ಪತ್ರವ್ಯವಹಾರ ಮಾಡಿದ್ದೀರಾ ಎಂದರೆ ಸಾಕ್ಷಿ 10.00 ಗಂಟೆಗೆ ಬರುತ್ತೇನೆ ನೀವು ಅದಕ್ಕೆ ವ್ಯವಸ್ಥೆ ಮಾಡಿಕೊಳ್ಳಿ ಎಂದು ಪತ್ರ ವ್ಯವಹಾರ ಮಾಡಿದ್ದೆನು ಎನ್ನುತ್ತಾರೆ. ಪ್ರತೀ ಸುತ್ತನ್ನು ಎಷ್ಟು ಸಮಯದಿಂದ ಎಷ್ಟು ಸಮಯದವರೆಗೆ ನಡೆಸಲಾಯಿತು ಎಂದು ನಿರ್ದಿಷ್ಟವಾಗಿ ತಿಳಿಸಲು ನಿಮಗೆ ಯಾವುದಾದರೂ ತೊಂದರೆ ಇತ್ತೇ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಆದರೆ ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 12.00 ಗಂಟೆಯವರೆಗೆ ಎಲ್ಲಾ ಸುತ್ತಿನ ಕವಾಯಿತನ್ನು ನಡೆಸಿದ್ದೇನೆ ಎನ್ನುತ್ತಾರೆ.

17. ಆರೋಪಿಗಳ ವಿವರಗಳನ್ನು ನಿಮಗೆ ಯಾರು ನೀಡಿದರು ಎಂದರೆ ಸಾಕ್ಷಿ ಜೆ ಎಂ ಎಫ್ ಸಿ ನ್ಯಾಯಾಲಯದಿಂದ ಬಂದ ಆದೇಶ ಪತ್ರದಲ್ಲಿ ಇತ್ತು ಮತ್ತು ಪೊಲೀಸರು ತಿಳಿಸಿದ್ದರು ಎನ್ನುತ್ತಾರೆ. ವಿಚಾರಣಾಧೀನ ಖೈದಿಗಳ ಹೆಸರು ಮತ್ತು

ವಿಳಾಸಗಳನ್ನು ನಿಮಗೆ ಯಾರು ನೀಡಿದರು ಎಂದರೆ ಸಾಕ್ಷಿ ಜೈಲಿನ ಅಧಿಕಾರಿಗಳು ಎನ್ನುತ್ತಾರೆ. ನೀವು ಜೈಲಿಗೆ ಹೋದಾಗ ಆರೋಪಿತರು ಜೈಲಿನ ಒಳಗಡೆ ಇದ್ದರೇ ಅಥವಾ ಹೊರಗಿನಿಂದ ಅವರನ್ನು ಕರತರಲಾಯಿತೇ ಎಂದರೆ ಸಾಕ್ಷಿ ನಾನು ಗಮನಿಸಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಬೆಳಿಗ್ಗೆ 10.00 ಗಂಟೆಗೆ ಪೊಲೀಸರು ತಮ್ಮ ಬೆಂಗಾವಲಿನಲ್ಲಿ ಆರೋಪಿತರನ್ನು ಕರೆದುಕೊಂಡು ಬಂದು ಹಾಜರುಪಡಿಸಿದರು ಎನ್ನುತ್ತಾರೆ.

18. ನೀವು ಜೈಲಿನಲ್ಲಿ ಯಾವುದೇ ಆರೋಪಿತರನ್ನು ನೋಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ನೀವು ಯಾವುದೇ ಆರೋಪಿತರನ್ನು ನೋಡದೇ ಇದ್ದರೂ ಸಹ ಪೊಲೀಸರು ನಿರ್ದೇಶನದಂತೆ ಈ ದಿನ ಅವರನ್ನು ಗುರುತಿಸಿ ಅವರನ್ನು ಜೈಲಿನಲ್ಲಿ ನೋಡಿದ್ದಾಗಿ ಹೇಳಿದ್ದೀರಿ ಎಂದರೆ ಸರಿಯಲ್ಲ. ಒಂದೇ ತರಹದ ಮುಖ ಚರಹೆಯ ವ್ಯಕ್ತಿಗಳು ಬೇಕು ಎಂದು ನೀವು ಜೈಲಿನ ಅಧಿಕಾರಿಗಳನ್ನು ಕೇಳಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ದಿನ ಜೈಲಿಗೆ ಪ್ರಾಸಾ.1 ರವರು ನನ್ನ ಜೊತೆ ಬಂದಿರಲಿಲ್ಲ. ನಾನು ಅಲ್ಲಿಗೆ ಹೋದ ನಂತರ ಪ್ರಾಸಾ.1 ರವರು ಬಂದರು.

19. ನೀವು ಪ್ರತೀ ಸುತ್ತಿನ ಕವಾಯಿತಿನಲ್ಲಿ ನಿಲ್ಲಿಸಿದ ವಿಚಾರಣಾಧೀನ ಖೈದಿಗಳನ್ನು ಒಬ್ಬರೇ ಇದ್ದರೇ ಅಥವಾ ಬೇರೆ ಬೇರೆ ಇದ್ದರೇ ಎಂದರೆ ಸಾಕ್ಷಿ ಬೇರೆ ಬೇರೆ ವಿಚಾರಣಾಧೀನ ಖೈದಿಗಳನ್ನು ನಿಲ್ಲಿಸಿದ್ದೆನು ಎನ್ನುತ್ತಾರೆ. ಒಂದು ಬಾರಿ ನಿಲ್ಲಿಸಿದ ವಿಚಾರಣಾಧೀನ ಖೈದಿಗಳನ್ನು ಮತ್ತೊಂದು ಸುತ್ತಿನಲ್ಲಿ ನಿಲ್ಲಿಸಿದ್ದೀರೇ ಇಲ್ಲವೇ ಎಂದರೆ ಸಾಕ್ಷಿ ಒಬ್ಬಿಬ್ಬರನ್ನು

ಬದಲಾಯಿಸಿದ್ದೇನೆ ಎನ್ನುತ್ತಾರೆ.

20. ನೀವು ಕವಾಯಿತನ್ನು ನಡೆಸಿದ್ದಾಗಿ, ಆಗ ಪ್ರಾಸಾ.1 ರವರು ಆರೋಪಿತರನ್ನು ನೋಡಿ ಗುರುತಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು ತಯಾರಿಸಿದ ನಿಪಿ.5 ರಿಂದ ನಿಪಿ.11 ಗಳಿಗೆ ನೀವು ಯಾಂತ್ರಿಕವಾಗಿ ಸಹಿ ಮಾಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ನೀವು ಜೈಲಿನ ಅಧಿಕಾರಿಗಳೊಂದಿಗೆ ಮಾಡಿಕೊಂಡಿದ್ದೀರಿ ಎಂದು ಹೇಳಲಾದ ಪತ್ರ ವ್ಯವಹಾರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ